# ವಾಹಿನಿ ಅಭಿವೃದ್ಧಿ ಸಂಸ್ಥೆ

**ಕಾನೀಶಾಲೆಹತ್ತಿರ, ಮೃತ್ಯುಂಜಯನಗರ, ಹೊಸಪೇಟೆ. 583203 ಬಳ್ಳಾರಿ ಜಿಲ್ಲೆ.**

Email-vahini_society@yahoo.co.in
vahinisociety@gmail.com
Mobile No :-9449569022 / 08394230222

## 2019-20 ನೇ ಸಾಲಿನ ವಾರ್ಷಿಕ ವರದಿ

### ಪೀಠಿಕೆ

ವಾಹಿನಿ ಅಭಿವೃದ್ಧಿ ಸಂಸ್ಥೆಯು ಒಂದು ನೊಂದಾಯಿತ ಲಾಭರಹಿತ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದ ಬಳ್ಳಾರಿ, ಚಿಕ್ಕಬಳ್ಳಾಪುರ, ಮತ್ತು ಶಿವಮೊಗ್ಗ, ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯು ದಿನಾಂಕ: 31.12.2001 ರಂದು ಕರ್ನಾಟಕ ರಾಜ್ಯ ಸಂಘ ಸಂಸ್ಥೆಗಳ ನೋಂದಣೆ ಅಧಿನಿಯಮ 1960 ರ ಅಡಿಯಲ್ಲಿ ಬಳ್ಳಾರಿ ಜಿಲ್ಲೆ ನೊಂದಣಾ ಕಛೇರಿಯಲ್ಲಿ ನೊಂದಣೆಯಾಗಿದ್ದು, ನೊಂದಣೆ ಸಂಖ್ಯೆ 220/2001-02. ಸಂಸ್ಥೆಯ ಆದಾಯ ತೆರಿಗೆ ಇಲಾಖೆಯ 12A ಕಾಯಿದೆ 1961 ರ ಅಡಿ ತೆರಿಗೆ ಮುಕ್ತ ಮತ್ತು ತೆರಿಗೆ ವಿನಾಯಿತಿ ಕಾಯಿದೆ 80G ಆದಾಯ ತೆರಿಗೆ ಅಡಿ ಸಂಸ್ಥೆಯು ವೈಯಕ್ತಿಕ ಕೊಡುಗೆ ಹಾಗೂ ದೇಣಿಗೆಯನ್ನು ಪಡೆಯಲು ಅರ್ಹತೆ ಪಡೆದಿದೆ. ಹಾಗೂ FCRA Act – 2010 ಅನುಮತಿಯನ್ನು ಕೂಡ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದಿಂದ ಪಡೆದಿರುತ್ತದೆ. ಸಂಸ್ಥೆಯ ನೋಂದಣಿ ಹಾಗೂ ಕೇಂದ್ರ ಕಛೇರಿಯು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿದ್ದು, ಸಂಸ್ಥೆಯ ಶಾಖಾ ಕಚೇರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಗುಡಿಬಂಡೆ, ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿದೆ.

**ದೂರದೃಷ್ಟಿ:–** **ಸಮುದಾಯ ಸಂಘಟನೆಗಳ ಮೂಲಕ ಹಿಂದುಳಿದವರ ಮತ್ತು ನಿರ್ಗತಿಕರ ಬಡತನ ಮಟ್ಟವನ್ನು ಕಡಿಮೆ ಗೊಳಿಸಿ ಆ ಮೂಲಕ ಸ್ವಾವಲಂಬನೆಯನ್ನು ಸಾಧಿಸುವುದು.**

**ಧ್ಯೇಯ:–** **ಸಮುದಾಯ ಸಹಕಾರ ಮತ್ತು ಸಹಭಾಗಿತ್ವದೊಂದಿಗೆ ಯೋಜನೆಗಳ ಪರಿಣಾಮಕಾರಿ ಹಾಗೂ ಸ್ವಂತಿಕೆಯ ತಿಳುವಳಿಕೆ ಮೂಡಿಸುವುದು, ಆ ನಿಟ್ಟಿನಲ್ಲಿ ಸಮುದಾಯವನ್ನು ಜಾಗೃತಿಗೊಳಿಸುವುದು.**

**ಉದ್ದೇಶಗಳು :-**

1. ಸಮುದಾಯ ಸಹಭಾಗಿತ್ವದೊಂದಿಗೆ ಅಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಮೂಲಕ ಸಮಗ್ರ ಗ್ರಾಮೀಣ ಅಭಿವೃಧ್ಧಿ ಸಾಧಿಸುವುದು.
2. ಜಲಾನಯನ ಅಭಿವೃದ್ಧಿ ಮತ್ತು ಸಮಗ್ರ ಸುಸ್ಥಿರ ಕೃಷಿ ಪದ್ದತಿಗಳ ಅಳವಡಿಕೆ ಮೂಲಕ ನೈಸರ್ಗಿಕ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಮಾಡುವದು.
3. ಮಹಿಳಾ ಸ್ವಾವಲಂಬನೆ.ಮತ್ತು ಮಕ್ಕಳ ರಕ್ಷಣೆ ಕುರಿತು ಜಾಗೃತಿ ಮೂಡಿಸುವುದು.
4. ಸರ್ಕಾರದ ಹಾಗೂ ಇತರೆ ಸಂಘ ಸಂಸ್ಥೆಗಳು ವಹಿಸುವ ಯಾವುದೇ ಅಭಿವೃದ್ಧಿ ಯೋಜನೆಗಳ ಸಮೀಕ್ಷೆ ಹಾಗೂ ವಿಶ್ಲೇಷಣೆ, ಮೌಲ್ಯಮಾಪನ ಮತ್ತು ಉಸ್ತುವಾರಿ ಕಾರ್ಯಗಳನ್ನು ಕೈಗೊಳ್ಳುವುದು.
5. ಗ್ರಾಮೀಣ ನೈರ್ಮಲೀಕರಣ, ಆರೋಗ್ಯ, ಶುಚಿತ್ವ ಶಿಕ್ಷಣಕ್ಕೆ ಆದ್ಯತೆ ನೀಡುವುದು.
6. ಸರ್ಕಾರ ಹಾಗೂ ಇತರೆ ಸಂಘ ಸಂಸ್ಥೆಗಳ ಸಹಾಭಾಗಿತ್ವದೊಂದಿಗೆ ಜೊತೆಗೂಡಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಮಾಡುವುದು.
7. ಬಾಲ ಕಾರ್ಮಿಕ ಹಾಗೂ ಜೀತ ಪದ್ದತಿಯಂತಹ ಸಾಮಾಜಿಕ ಪಿಡುಗುಗಳ ಬಗ್ಗೆ ತಿಳುವಳಿಕೆ ಮೂಡಿಸುವುದು.
8. ಗ್ರಾಮೀಣ ಹಾಗೂ ನಗರ ಜನರ ಆರ್ಥಿಕ ಮಟ್ಟ ಸುಧಾರಿಸಲು ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಮೂಲಕ ಆದಾಯೋತ್ವನ್ನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸುವುದು.

# 2019-20 ನೇ ಸಾಲಿನಲ್ಲಿ ನಮ್ಮ ಸಂಸ್ಥೆಯು ಹಮ್ಮಿಕೊಂಡ ಕಾರ್ಯಕ್ರಮಗಳ ವಾರ್ಷಿಕ ವರದಿ.

**ಕರ್ನಾಟಕ ರಾಜ್ಯ ಬಾಲ ಭವನ ಸೊಸೈಟಿ, ಬೆಂಗಳೂರು, ತಾಲೂಕು ಬಾಲಭವನ ಸಮಿತಿ ಹೊಸಪೇಟೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಸಾರ್ವಜನಿಕ ಶಿಕ್ಷಣ ಇಲಾಖೆ ಹೊಸಪೇಟೆ ಹಾಗೂ ವಾಹಿನಿ ಅಭಿವೃದ್ಧಿ ಸಂಸ್ಥೆ ಸಹಯೋಗದೊಂದಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು ಈ ಕಾರ್ಯಕ್ರಮಗಳ ವರದಿ:-**

## 1.ತಾಲೂಕ ಮಟ್ಟದ ಮಕ್ಕಳ ಕಲಾ ಉತ್ಸವ ಹಾಗೂ ಕಲಾಶ್ರೀ ಪ್ರಶಸ್ತಿ ಆಯ್ಕೆ ಕಾರ್ಯಕ್ರಮ

**ಕರ್ನಾಟಕ ರಾಜ್ಯ** ಬಾಲ ಭವನ ಸೊಸೈಟಿ, ಬೆಂಗಳೂರು, ತಾಲೂಕು ಬಾಲಭವನ ಸಮಿತಿ ಹೊಸಪೇಟೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಸಾರ್ವಜನಿಕ ಶಿಕ್ಷಣ ಇಲಾಖೆ ಹೊಸಪೇಟೆ ಹಾಗೂ ವಾಹಿನಿ ಅಭಿವೃದ್ಧಿ ಸಂಸ್ಥೆ ಇವರ ಸಹಯೋಗದೊಂದಿಗೆ 2019-20 ನೇ ಸಾಲಿನ 9 ವರ್ಷದಿಂದ 16 ವರ್ಷದೊಳಗಿನ

ಮಕ್ಕಳಿಗೆ ಮಕ್ಕಳ ದಿನಾಚರಣೆ ಅಂಗವಾಗಿ ತಾಲೂಕು ಮಟ್ಟದ ಕಲಾ ಉತ್ಸವ ಮತ್ತು ಕಲಾಶ್ರೀ ಪ್ರಶಸ್ತೀ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ 4 ವಿವಿಧ ಚಟುವಟಿಕೆಗಳಾದ ಕಥೆ, ಕವನ, ಪ್ರಬಂಧ, ಸಂಗೀತ, ನೃತ್ಯ, ಯೋಗ, ಯಕ್ಷಗಾನ, ಏಕಪಾತ್ರಾಭಿನಯ, ಜೇಡಿಮಣ್ಣಿನ ಕಲೆ ಕರಕುಶಲ, ಚಿತ್ರಕಲೆ ಮತ್ತು ವಿಜ್ಞಾನದಲ್ಲಿ ನೂತನ ಆವಿಷ್ಕಾರ ಇವುಗಳಲ್ಲಿ ಮಕ್ಕಳು ಯಾವುದಾದರೂ ಕಲೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಹೊರಹಾಕುವುದು ಹಾಗೂ ಮಕ್ಕಳಲ್ಲಿ ಸ್ಮರಣಶಕ್ತಿ, ಗ್ರಹಣಶಕ್ತಿ, ಬರವಣಿಗೆಯಿಂದ ಬುದ್ದಿಶಕ್ತಿ ಹೆಚ್ಚುಗುತ್ತದೆ. ಹಾಗೂ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದ್ದು ಈ ಕಾರ್ಯಕ್ರಮವನ್ನು ದಿನಾಂಕ:–06.11.2019 ರಂದು ಅಪೂರ್ವ ಕೋಚಿಂಗ್ ಸೆಂಟರ್, ಹೊಸಪೇಟೆ ಇಲ್ಲಿ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ, ಶ್ರೀಅಮರೇಶ್–ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು, ಶ್ರೀ ಸಂಜೀವಪ್ಪ–ಸಿ.ಆರ್.ಪಿ, ಶಿಕ್ಷಣ ಇಲಾಖೆ, ಶ್ರೀ ಪಾಟೀಲ್–ಸಹಶಿಕ್ಷಕರು, ವಿನೋಬಭಾವೆ ಶಾಲೆ, ಮಾಜಿ ನಗರ ಸಭೆ ಅಧ್ಯಕ್ಷರಾದ ಶ್ರೀಮತಿ ನೂರ್ ಜಹಾನ್, ಮೇಲ್ವಿಚಾರಕರು–ಸಿ.ಡಿ.ಪಿ.ಓ.ಇಲಾಖೆ ಹಾಗೂ ಆಸಕ್ತ 100 ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು.

## ಕಾರ್ಯಕ್ರಮದ ಪೋಟೊಗಳು









## ವಾರಾಂತ್ಯ ಚಟುವಟಿಕೆಗಳ ಕಾರ್ಯಕ್ರಮ (ಕ್ರೀಯಾತ್ಮಕ & ಸೃಜನಾತ್ಮಕ)

**ಕರ್ನಾಟಕ ರಾಜ್ಯ ಬಾಲ** ಭವನ ಸೊಸೈಟಿ, ಬೆಂಗಳೂರು, ತಾಲೂಕು ಬಾಲಭವನ ಸಮಿತಿ ಹೊಸಪೇಟೆ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಸಮಗ್ರ ಶಿಶು ಅಭಿವೃದ್ದಿ ಯೋಜನೆ ಸಾರ್ವಜನಿಕ ಶಿಕ್ಷಣ ಇಲಾಖೆ ಹೊಸಪೇಟೆ ಹಾಗೂ ವಾಹಿನಿ ಅಭಿವೃದ್ದಿ ಸಂಸ್ಥೆ ಇವರ ಸಹಯೋಗದೊಂದಿಗೆ 2019-20 ನೇ ಸಾಲಿನ 9 ವರ್ಷದಿಂದ 16 ವರ್ಷದೊಳಗಿನ ಮಕ್ಕಳಿಗೆ ವಾರಾಂತ್ಯ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದಲ್ಲಿ ಸೃಜನಾತ್ಮಕ ಮತ್ತು ಕ್ರಿಯಾತ್ಮಕ ಚಟುವಟಿಕೆಗಳಾದ ಚಿತ್ರಕಲೆ, ಕರಕುಶಲ, ಜೇಡಿಮಣ್ಣಿನ ಕಲೆ, ರಂಗಚಟವಟಿಕೆ, ಸಮೂಹ ನೃತ್ಯ–ಸಂಗೀತ, ಯೋಗ ಇತ್ಯಾದಿ ಯಾವುದಾದರೂ 2 ಚಟುವಟಿಕೆಗಳಲ್ಲಿ ನರಿತ ಅನುಭವೀ ಸಂಪನ್ಮೂಲ ವ್ಯಕ್ತಿಗಳಿದ ಪ್ರತೀ ಶನಿವಾರ ಭಾನುವಾರ ಆಗಸ್ಟ್–19 ರಿಂದ ಜನವರಿ 2020 ರವರೆಗೆ 50 ಮಕ್ಕಳಿಗೆ ಸರ್ಕಾರಿ ಶಾಲೆ/ಸೌಲಭ್ಯ ವಂಚಿತ ಮಕ್ಕಳಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಗೊಳಿಸಲಾಯಿತು. ಕಾರ್ಯಕ್ರಮವನ್ನು ದಿನಾಂಕ 15.08.2019 ರಂದು ಉದ್ಘಾಟಿಸಲಾಯಿತು.ಈ ಕಾರ್ಯಕ್ರಮಕ್ಕೆ ಶ್ರೀ ಅಮರೇಶ್–ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು, ಶ್ರೀ ಕೆ.ಶಿವಕುಮಾರ್–ಕಾರ್ಯದರ್ಶಿಗಳು ಶ್ರೀ ಗೋವಿಂದ್–ಸದಸ್ಯರು,ವಾಹಿನಿ ಅಭಿವೃದ್ದಿ ಸಂಸ್ಥೆ ಹಾಗೂ ಮತ್ತು ವಾಹಿನಿ ಸಂಸ್ಥೆಯ ಸಿಬ್ಬಂದಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಮಕ್ಕಳಿಗೆ ಓದಿನ ಜೊತೆಗೆ ವಾರಾಂತ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರಹೊಮ್ಮಿಸಲು ಅವಕಾಶವಾಗುತ್ತದೆ. ಇದರೊಂದಿಗೆ ಮಕ್ಕಳು ಸದಾ ಚಟುವಟಿಕೆಯಿಂದ ಇರುತ್ತಾರೆ. ಪ್ರತಿ ವಾರ 2 ದಿನಗಳು ಒಟ್ಟು 50 ಮಕ್ಕಳು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡಿರುತ್ತಾರೆ. ದಿನಾಂಕ 26.01.2020 ರಂದು ಈ ವಾರಾಂತ್ಯ ಚಟುವಟಿಕೆಯ ಸಮಾರೋಪ ಸಮಾರಂಭವನ್ನು ಮಾಡಿದ್ದು ಈ ಕಾರ್ಯಕ್ರಮದಲ್ಲಿ ಶಿಶು ಅಭಿವೃದ್ದಿ ಯೋಜಾಧಿಕಾರಿಗಳು, ಮೇಲ್ವಚಾರಕರು ಹಾಗೂ ವಾಹಿನಿ ಸಂಸ್ಥೆ ಸಿಬ್ಬಂದಿಗಳು ಮತ್ತು 50 ಮಕ್ಕಳು ಸೇರಿ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿ ವಿಜೇತರಾದವರಿಗೆ ಅತಿಥಿಗಳಿಂದ ಬಹುಮಾನ ಹಾಗೂ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು.

### ಕಾರ್ಯಕ್ರಮದ ಫೋಟೊಗಳು





## ಗಾಂಧಿ ಜಯಂತಿ ಅಂಗವಾಗಿ "ಮಕ್ಕಳ ಚಿತ್ರಕಲೆ ಸ್ಪರ್ಧೆ" ಕಾರ್ಯಕ್ರಮ

ದಿನಾಂಕ 02.10.2019 ರಂದು ಗಾಂಧಿ ಜಯಂತಿ ಅಂಗವಾಗಿ 05-16 ವರ್ಷದೊಳಗಿನ ಮಕ್ಕಳಿಗೆ ಚಿತ್ರಕಲೆಯನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಶ್ರೀಮತಿ ಡಾ॥ಸುಲೋಚನಾ–ಅಧ್ಯಕ್ಷರು, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಂಸ್ಥೆ, ಶ್ರೀ ಅಮರೇಶ್–ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು, ಶ್ರೀ ಕೆ.ಶಿವಕುಮಾರ್–ವಾಹಿನಿ ಅಭಿವೃದ್ದಿ ಸಂಸ್ಥೆ ಕಾರ್ಯದರ್ಶಿ, ಮೇಲ್ವಿಚಾರಕರು–ಸಿ.ಡಿ.ಪಿ.ಓ ಇಲಾಖೆ ಹಾಗೂ ಒಟ್ಟು 100 ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೆಂದರೆ ದೇಶಕ್ಕೆ ಸ್ವಾತ್ರಂತ್ರ್ಯವನ್ನು ತಂದು ಕೊಟ್ಟ ಗಾಂಧಿ ಜಯಂತಿ ಸ್ಮರಾಣಾರ್ಥ ಮಕ್ಕಳು ದೇಶಾಭಿಮಾನವನ್ನು ಸಾರುವ ಹಲವಾರು ಚಿತ್ರಗಳನ್ನು ಬಿಡಿಸುವುದು. ನಾವೆಲ್ಲರೂ ಒಂದೇ ಎನ್ನುವ ಮನೋಭಾವನೆಯನ್ನು ಬೆಳೆಸುವುದು, ಉತ್ತಮ ಮೌಲ್ಯಗಳನ್ನು ಮಕ್ಕಳು ತಮ್ಮಲ್ಲಿ ಅಳವಡಿಸಿಕೊಳ್ಳುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ, ವಿಜೇತರಾದ ಮಕ್ಕಳಿಗೆ ಬಹುಮಾನ ಹಾಗೂ ಭಾಗವಹಿಸಿದ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

### ಕಾರ್ಯಕ್ರಮದ ಪೋಟೊಗಳು





## "ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಮಕ್ಕಳಿಗೆ ಚಿತ್ರಕಲೆ ಮತ್ತು ವೇಷಭೂಷಣ ಸ್ಪರ್ಧೆ"

ದಿನಾಂಕ 16.02.2020 **ಗಣರಾಜ್ಯೋತ್ಸವ ದಿನಾಚರಣೆ** ಅಂಗವಾಗಿ 05-16 ವರ್ಷದೊಳಗಿನ ಮಕ್ಕಳಿಗೆ ಚಿತ್ರಕಲೆ ಮತ್ತು ವೇಷಭೂಷಣ ಸ್ಪರ್ಧೆಯನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಶ್ರೀ ಅಮರೇಶ್–ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು, ಶ್ರೀ ಪಾಟೀಲ್–ಶಿಕ್ಷಕರು ವಿನೋಬಭಾವೆ ಶಾಲೆ, ಶ್ರೀಕೆ.ಶಿವಕುಮಾರ್–ವಾಹಿನಿ ಅಭಿವೃದ್ದಿ ಸಂಸ್ಥೆ ಕಾರ್ಯದರ್ಶಿ, ಮೇಲ್ವಿಚಾರಕರು–ಸಿ.ಡಿ.ಪಿ.ಓ ಇಲಾಖೆ ಹಾಗೂ ಒಟ್ಟು 100 ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೆಂದರೆ ದೇಶ ಪ್ರೇಮವನ್ನು ಸಾರುವ ಚಿತ್ರಗಳನ್ನು ಮಕ್ಕಳು ಚಿತ್ರಕಲೆಯಲ್ಲಿ ಬಿಡಿಸುವುದು, ದೇಶಕ್ಕಾಗಿ ಹೋರಾಡಿದ ಧೀಮಂತರ ವೇಷಭೂಷಣಗಳ ಸ್ಪರ್ದೆ, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ.

## ಕಾರ್ಯಕ್ರಮದ ಪೋಟೊಗಳು





## ವಿಜ್ಞಾನ ಚಟುವಟಿಕೆಗಳು (ಪ್ರಯೋಗ,ವಿಷ್ಯುಯಲ್ಸ್,ಉಪನ್ಯಾಸ) ಕಾರ್ಯಕ್ರಮ

ದಿನಾಂಕ 14.02.2020 ಮತ್ತು 15.02.2020 ರಂದು 05-16 ವರ್ಷದೊಳಗಿನ ಮಕ್ಕಳಿಗೆ ವಿಜ್ಞಾನ ಚಟುವಟಿಕೆಗಳ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮವನ್ನು ಶ್ರೀ ಅಮರೇಶ್–ಶಿಶು ಅಭಿವೃದ್ಧಿ ಯೋಜಾಧಿಕಾರಿಗಳು ಉದ್ಘಾಟಿಸಿದರು, ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಶ್ರೀಮತಿ ಶೋಭಾ–ಶಿಕ್ಷಕರು, ಪಟೇಲ್ ಶಾಲೆ. ಹಾಗೂ ಶ್ರೀ ಪ್ರಶಾಂತ್–ಶಿಕ್ಷಕರು ವಿನೋಬಭಾವೆ ಶಾಲೆ, ಶ್ರೀ ಪಾಟೀಲ್–ವಿನೋಬಭಾವೆ ಶಾಲೆ ಶಿಕ್ಷಕರು ಹಾಗೂ 75 ಮಕ್ಕಳು ಹಾಗೂ ಹಲವಾರು ಶಾಲಾ ಶಿಕ್ಷಕರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೆಂದರೆ ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿಸುವುದು, ಮಕ್ಕಳು ಹಲವಾರು ವಿಜ್ಞಾನಕ್ಕೆ ಸಂಬಂದಿಸಿದ ಸಂಶೋಧನೆಗಳನ್ನು ಚಟುವಟಿಕೆಗಳನ್ನು ಶಿಕ್ಷಕರು ಮಕ್ಕಳಿಗೆ ಪ್ರಾಯೋಗಿಕವಾಗಿ ಹೇಳಿಕೊಟ್ಟರು, ಸಲಹೆ ಮೇರೆಗೆ ಪ್ರಾಯೋಗಿಕವಾಗಿ ಕೈಗೊಳ್ಳುವುದು ಇದರಿಂದ ಮಕ್ಕಳಲ್ಲಿ ಹೆಚ್ಚಿನ ಉತ್ಸಾಹ ಹೆಚ್ಚುವುದಲ್ಲದೆ ಓದಿನ ಕಡೆ ಹೆಚ್ಚು ಒಲವು ಬರುತ್ತದೆ. ಬುದ್ದಿಶಕ್ತಿ ಕೂಡ ಹೆಚ್ಚುತ್ತದೆ. ಈ ಕಾರ್ಯಕ್ರಮದಲ್ಲಿ ಹಲವಾರು ಪ್ರಯೋಗಗಳನ್ನು ಸಂಪನ್ಮೂಲ ವ್ಯಕ್ತಿಗಳು ಮಕ್ಕಳಿಗೆ ಮಾಡಿ ತೋರಿಸಿದರು.

ಕಾರ್ಯಕ್ರಮದ ಪೋಟೊಗಳು





## ಸ್ವಾತಂತ್ರ್ಯ ದಿನಚರಣೆ ಅಂಗವಾಗಿ ಮಕ್ಕಳಿಗೆ ದೇಶಭಕ್ತಿ ಗೀತೆ ಸ್ಪರ್ಧೆ

ದಿನಾಂಕ 02.11.2020 ರಂದು 05-16 ವರ್ಷದೊಳಗಿನ ಮಕ್ಕಳಿಗೆ ದೇಶಭಕ್ತಿಗೀತೆಗಳನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿಹಿರಿಯ ಗಾಯಕರು ಹಾಗೂ ಘಟಕಾಧಿಕಾರಿಗಳು, ಶ್ರೀ ವಾಲ್ಯಾನಾಯಕ್ ಹಾಗೂ, ಶ್ರೀ ಕೆ.ಶಿವಕುಮಾರ್–ಕಾರ್ಯದರ್ಶಿ ವಾಹಿನಿ ಅಭಿವೃದ್ಧಿ ಸಂಸ್ಥೆ, ಮೇಲ್ವಿಚಾರಕರು–ಸಿ.ಡಿ.ಪಿ.ಓ ಇಲಾಖೆ, ಹಾಗೂ ಒಟ್ಟು 50 ಮಕ್ಕಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೆಂದರೆ ದೇಶಕ್ಕಾಗಿ ಹೋರಾಡಿದ ನಾಯಕರುಗಳ ಕಥೆಯನ್ನು ಹೇಳಿ ದೇಶಭಿಮಾನವನ್ನು ಮಕ್ಕಳಲ್ಲಿ ಬೆಳೆಸುವುದು. ದೇಶಪ್ರೇಮವನ್ನು ಸಾರುವ ಹಲವಾರು ದೇಶಭಕ್ತಿಗೀತೆಗಳ್ನು ಮಕ್ಕಳು ಪ್ರಸ್ತುತ ಪಡಿಸುವುದು. ನಾವೆಲ್ಲರೂ ಒಂದೇ ಎನ್ನುವ ಮನೋಭಾವನೆಯನ್ನು ಬೆಳೆಸುವುದು. ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಈ ಕಾರ್ಯಕ್ರಮದ ಧ್ಯೇಯವಾಗಿತ್ತು. ಈ ಕಾರ್ಯಕ್ರಮದಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ಅಥಿತಿಗಳಿಂದ ವಿತರಿಸಲಾಯಿತು.

### ಕಾರ್ಯಕ್ರಮದ ಪೋಟೋಗಳು





## 2.ಸ್ವಚ್ಚ ಭಾರತ ಮಿಷನ್ ಗ್ರಾಮೀಣ ಯೋಜನೆ ಅಡಿ ಜಿಲ್ಲಾ ಪಂಚಾಯಿತಿ ಬಳ್ಳಾರಿ, ಹಾಗೂ ವಾಹಿನಿ ಅಭಿವೃದ್ಧಿ ಸಂಸ್ಥೆ, ಹೊಸಪೇಟೆ ಇವರ ಸಹಯೋಗದೊಂದಿಗೆ "ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ" ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳು(ಐಇಸಿ/ಹೆಚ್.ಆರ್.ಡಿ)

ಸ್ವಚ್ಚ ಭಾರತ ಮಿಷನ್ ಗ್ರಾಮೀಣ ಯೋಜನೆ, ಜಿಲ್ಲಾ ಪಂಚಾಯಿತಿ, ಬಳ್ಳಾರಿ, ಹಾಗೂ ವಾಹಿನಿ ಅಭಿವೃದ್ಧಿ ಸಂಸ್ಥೆ ಸಹಯೋಗದೊಂದಿಗೆ "ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ" ಕಾರ್ಯಕ್ರಮವನ್ನು ಬಳ್ಳಾರಿ ಜಿಲ್ಲೆಯ 3 ತಾಲೂಕುಗಳಾದ ಕೂಡ್ಲಿಗಿ, ಸಂಡೂರು ಮತ್ತು ಸಿರುಗುಪ್ಪ ತಾಲೂಕಿಗೆ ಸಂಬಂದಿಸಿದ ಆಯ್ದ 4 ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳಲ್ಲಿ ಮಾಹಿತಿ ಶಿಕ್ಷಣ ಸಂವಹನ ಹಾಗೂ ಸಾಮಾರ್ಥ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು, ಗ್ರಾಮಸ್ಥರಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಹಾಗೂ ಕುಡಿಯುವ ನೀರು ಕುರಿತು ಸ್ರೀಶಕ್ತಿ ಸಂಘದ ಮಹಿಳೆಯರಿಂದ ಮನೆ–ಮನೆ ಭೇಟಿ, ಶಾಲಾ ಮಕ್ಕಳ ಜಾಥಾ & ಕಿರುಚಿತ್ರ ಪ್ರದರ್ಶನ, ಶಾಲಾ ಮಕ್ಕಳಿಗೆ ಭಾಷಣ ಸ್ಪರ್ಧೆ, ಮಹಿಳೆಯರಿಗೆ ಸ್ವಚ್ಚತೆಗೆ ಸಂಬಂದಿಸಿದಂತೆ ರಂಗೋಲಿ ಸ್ಪರ್ಧೆ , ಬೀದಿನಾಟಕ, ವಿಶೇಷ ಸ್ವಚ್ಚತಾ ಸಮಾವೇಶ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅರಿವು ಮೂಡಿಸುವ ನಿಟ್ಟಿನಲ್ಲಿ ಹಸಿಕಸ ಒಣ ಕಸ ಬೇರ್ಪಡಿಸಿ ಮರುಬಳಕೆ ಮಾಡಲು ಪ್ರತಿ ಗ್ರಾಮ ಪಂಚಾಯತಿಯಲ್ಲಿ ಘಟಕ ಸ್ಥಾಪನೆ. ಎಲ್ಲಾ ಮನೆಗಳಿಗೆ 2(1ನೀಲಿ,1

ಹಸಿರು ಬಣ್ಣದ) ಡಬ್ಬಗಳನ್ನು ನೀಡಿ ಪ್ರತಿದಿನ ಮನೆಯಿಂದ ಸಂಗ್ರಹವಾಗುವ, ಹಸಿಕಸವನ್ನು, ಹಸಿರು ಡಬ್ಬದಲ್ಲಿ ಮತ್ತು ಒಣಕಸವನ್ನು ನೀಲಿಡಬ್ಬದಲ್ಲಿ ಸಂಗ್ರಹಿಸಿ, ಪಂಚಾಯತಿಕಡೆಯಿಂದ ಬರುವ ಕಸಸಂಗ್ರಣೆ ವಾಹನದಲ್ಲಿ ಹಾಕಲು ಎಲ್ಲಾ ಮನೆಗಳಿಗೂ ತಿಳಿಸಲಾಗಿದೆ, ಈ ಸಂಗ್ರಹವಾದ ಕಸವನ್ನು ಸಂಸ್ಕರಣಾ ಘಟಕದಲ್ಲಿ ಗೊಬ್ಬರವನ್ನಾಗಿ ಪರಿವರ್ತನೆ ಮಾಡುವುದು. ಇದರಿಂದ ಗ್ರಾಮಕ್ಕೆ ಸಂಪನ್ಮೂಲ ದೊರೆಯುವಂತೆ ಮಾಡುವುದು. ಸ್ವಚ್ಚತೆಗೆ ಹೆಚ್ಚಿನ ಆದ್ಯತೆ ನೀಡುವುದು ಹಾಗೂ ಶೌಚಾಲಯಗಳ ನಿರ್ವಹಣೆ ಹಾಗೂ ನೀರನ್ನು ಸಮರ್ಪಕವಾಗಿ ಬಳಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ.

## 2019-20 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಸಚಿಡೂರು | ಸಿರಗುಪ್ಪ | ಕೂಡ್ಲಿಗಿ | ಭಾಗವಹಿಸಿದವರ ಸಂಖ್ಯೆ |
|---|---|---|---|---|---|
| 1 | ಸ್ವಚ್ಚತಾ ಸಮಾವೇಶಗಳು | 01 | 01 | 02 | 450 |
| 2 | ಶಾಲಾಮಕ್ಕಳ ಜಾಥಾ ಮತ್ತು ಕಿರುಚಿತ್ರ ಪ್ರದರ್ಶನ | 08 | 03 | 12 | 3450 |
| 3 | ಶಾಲಾ ಮಕ್ಕಳ ಭಾಷಣ ಸ್ಪರ್ಧೆ | 08 | 03 | 12 | 575 |
| 4 | ಸ್ತ್ರೀಶಕ್ತಿ ಸಂಘದ ಮಹಿಳೆಯರಿಂದ ಮನೆ-ಮನೆ ಭೇಟಿ ಕಾರ್ಯಕ್ರಮ | 08 | 03 | 12 | 1150 |
| 5 | ರಂಗೋಲಿ ಸ್ಪರ್ಧೆ | 08 | 03 | 12 | 690 |
| 6 | ಬೀದಿನಾಟಕ | 08 | 03 | 12 | 3000 |










# 3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಹಾಗೂ ವಾಹಿನಿ ಅಭಿವೃದ್ಧಿ ಸಂಸ್ಥೆ ಸಹಯೋಗದೊಂದಿಗೆ ಒಂದು ದಿನದ "ನವೀಕರಿಸಬಹುದಾದ ಇಂಧನ, ಸೌರಶಕ್ತಿ ಮತ್ತು ಅದರ ಉಪಯೋಗಗಳು, ಘನತ್ಯಾಜ್ಯ ನಿರ್ವಹಣೆ ಮತ್ತು ಮಳೆನೀರುಕೊಯ್ಲು" ಕುರಿತು ಅರಿವು ಮೂಡಿಸುವ ಕಾರ್ಯಕ್ರಮ

ಈ ಕಾರ್ಯಕ್ರಮಗಳನ್ನು ಕೊಪ್ಪಳ ಜಿಲ್ಲೆಯಲ್ಲಿ ಸ್ವಸಹಾಯ ಸಂಘದ ಮಹಿಳೆಯರಿಗೆ ಮತ್ತು ಗ್ರಾಮಸ್ಥರಿಗೆ ನವೀಕರಿಸಬಹುದಾದ ಇಂಧನ ಮೂಲಗಳು ಮತ್ತು ಇತರೆ ಸಂಬಂಧಿಸಿದ ವಿಷಯಗಳ ಕುರಿತು ಅರಿವುಮೂಡಿಸುವ ಜಾಗೃತಿ ಕಾರ್ಯಕ್ರಮಗಳನ್ನು ಆಯ್ದ 7 ಗ್ರಾಮ ಪಂಚಾಯಿತಿಗಳಲ್ಲಿ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಸೌರಶಕ್ತಿ ಬಳಕೆ, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಜೈವಿಕ ಇಂಧನಗಳ ಬಳಕೆ, ಪವನಶಕ್ತಿ ಈ ವಿಷಯಗಳ ಕುರಿತು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಮಹಿಳೆಯರಿಗೆ & ಗ್ರಾಮಸ್ಥರಿಗೆ ತರಬೇತಿ ನೀಡಲಾಯಿತು, ಈ ತರಬೇತಿಯನ್ನು ಮೊದಲಿಗೆ ದಿನಾಂಕ 12.06.2019 ರಂದು ಬೇವಿನಹಳ್ಳಿಯಲ್ಲಿ ಶ್ರೀ ಗಣಪತಿ ನಾಯ್ಕ್–ತಾಂತ್ರಿಕ ಸಹಾಯಕರು, ಸೋಲಾರ್ ಡಿಪಾರ್ಟ್‌ಮೆಂಟ್, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಪ್ರತಿನಿಧಿ ರವರು ಉದ್ಘಾಟಿಸಿ ಮಾತನಾಡಿ ಸಂಸ್ಥೆಯ ಗುರಿ ಉದ್ದೇಶಗಳ ಬಗ್ಗೆ ಸಂಪೂರ್ಣವಾಗಿ ವಿವರಿಸಿದರು. ಪರಿಸರದಲ್ಲಿ ಸಿಗುವ ಸಂಪನ್ಮೂಲಗಳ ಬಳಕೆಯನ್ನು ನಾವು ನಮ್ಮ ನಿತ್ಯ ಜೀವನದ ಕೆಲಸಗಳಲ್ಲಿ ಅಳವಡಿಸಿಕೊಳ್ಳಬೇಕು. ಅವುಗಳಲ್ಲಿ ಮುಖ್ಯವಾಗಿ ಗಾಳಿ, ನೀರು, ಸೂರ್ಯಶಕ್ತಿ, ನೈಸರ್ಗಿಕ ಸಂಪನ್ಮೂಲಗಳು ಕೃಷಿ ತ್ಯಾಜ್ಯ ವಸ್ತುಗಳು, ಒಣಕಸಕಡ್ಡಿ ಹಸಿರೆಲೆ ಮುಂತಾದವುಗಳು. ಜಗತ್ತಿನ ತಾಪಮಾನ ಅತೀ ಹೆಚ್ಚಾಗುತ್ತಿದೆ. ಪರಿಸರದಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಬೇಕಾಗಿದ್ದು ನಮ್ಮೆಲ್ಲರ ಹೊಣೆ. ನಾವು ಅತೀ ಹೆಚ್ಚು ಮರಗಿಡಗಳನ್ನು ಬೆಳೆಸಬೇಕು. ಇದರಿಂದ ಕೆಲವು ಇಂಧನಗಳನ್ನು ತಯಾರಿಸುವ ಗಿಡಗಳು ಸಹ ಇರುತ್ತವೆ. ಇವುಗಳನ್ನು ನಾವು ವಾಹನಗಳಿಗೆ ಬಳಸಿ ಪರಿಸರ ಮಾಲಿನ್ಯತೆಯನ್ನು ತಡೆಗಟ್ಟಬಹುದು ಎಂದು ತಿಳಿಸುತ್ತಾ ಈ ತರಬೇತಿಗಳ ಸದುಪಯೋಗ ಪಡೆದುಕೊಂಡು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ದಿನಾಂಕ 19.08.2019 ರಂದು ಬಹದ್ದೂರ ಬಂಡಿ ಗ್ರಾಮ ಪಂಚಾಯಿತಿಯಲ್ಲಿ ಕ್ಷೇತ್ರ ಮಟ್ಟದ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಚುನಾಯಿತಿ ಪ್ರತಿನಿಧಿಗಳಿಗೆ ನವೀಕರಿಸಬಹುದಾದ ಇಂಧನ ಮೂಲಗಳು ಮತ್ತು ಇತರೆ ವಿಷಯಗಳ ಬಗ್ಗೆ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಶ್ರೀ ಪ್ರಮೋದ್––ಸಹಾಯಕ ನಿರ್ದೇಶಕರು, ಸೋಲಾರ್ ಡಿಪಾರ್ಟ್‌ಮೆಂಟ್, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಪ್ರತಿನಿಧಿ ರವರು ಮಾತನಾಡಿ ಸಂಸ್ಥೆಯ ಗುರಿ ಉದ್ದೇಶಗಳ ಬಗ್ಗೆ ಸಂಪೂರ್ಣವಾಗಿ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಚುನಾಯಿತ ಪ್ರತಿನಿಧಿಗಳು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತರಬೇತಿಯಲ್ಲಿ ಭಾಗವಹಿಸಿದ್ದರು.

## ಚಟುವಟಿಕೆಗಳನ್ನು ಹಮ್ಮಿಕೊಂಡ ವಿವರಗಳು

| ಕ್ರ.ಸಂ | ತಾಲೂಕು | ಕಾರ್ಯಕ್ರಮ ನಡೆದ ಸ್ಥಳ/ ಗ್ರಾಮ ಪಂಚಾಯಿತಿ ಹೆಸರು | ದಿನಾಂಕ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 1 | ಕೊಪ್ಪಳ | ಬೇವಿನಹಳ್ಳಿ | 12.06.2019 | 69 |
| 2 | ಕೊಪ್ಪಳ | ಲಿಂಗದಹಳ್ಳಿ | 13.06.2019 | 64 |
| 3 | ಕೊಪ್ಪಳ | ಕರ್ಕಿಹಳ್ಳಿ | 14.06.2019 | 72 |
| 4 | ಕೊಪ್ಪಳ | ಹನುಮನಾಳ್ | 15.06.2019 | 70 |
| 5 | ಕೊಪ್ಪಳ | ಕಿನ್ನಾಳ್ | 03.07.2019 | 76 |
| 6 | ಕೊಪ್ಪಳ | ಇರಕಲಗ್ವಡಾ | 04.07.2019 | 70 |
| 7 | ಯಲಬುರ್ಗಾ | ಬೇವೂರು | 05.07.2019 | 47 |
| 8 | ಕೊಪ್ಪಳ | ಬಹದ್ದೂರ ಬಂಡಿ | 19.08.2019 | 61 |
| | | | **Total** | **529** |









## 4.ನಬಾರ್ಡ್ ಪ್ರಾಯೋಜಿತ ಕೃಷಿಯಲ್ಲಿ ಸುಸ್ಥಿರ ಅಭಿವೃದ್ಧಿ ಯೋಜನೆ

ಜಲಾನಯನ ಅಭಿವೃದ್ಧಿ ಹೊಂದಿದ ಕ್ಷೇತ್ರಗಳಿಗೆ ಯೋಜನೆಯ ಸುಸ್ಥಿರತೆ ಹಾಗೂ ರೈತರ ಆದಾಯದಲ್ಲಿ ಹೆಚ್ಚಳ ಮಾಡಬೇಕುನ್ನುವ ಉದ್ದೇಶದಿಂದ 2 ವರ್ಷಗಳ ಅವಧಿಗೆ 2017 ಏಪ್ರಿಲ್ ನಿಂದ ಮಾರ್ಚ್ 2019 ರವರೆಗೆ ನಬಾರ್ಡ ಪ್ರಾಯೋಜಿತ ಕೃಷಿಯಲ್ಲಿ ಸುಸ್ಥಿರ ಅಭಿವೃದ್ಧಿ ಯೋಜನೆಯನ್ನು ಸಂಸ್ಥೆಯು ಆರಂಭಿಸಿತು. ಈ ಯೋಜನೆಅಡಿ ಶಿವಮೊಗ್ಗ ಜಿಲೆ ಶಿಕಾರಿಪುರ ತಾಲೂಕಿನಲಿ ಉಡಗಣಿ ಮತ್ತು ಕಣಿಯಾ ಗ್ರಾಮಗಳು ಆಯ್ಕೆ ಮಾಡಲಾಗಿರುತ್ತದೆ. ಪ್ರತಿ ಗ್ರಾಮಗಳಿಗೆ

ರೂ.10,00,000/- ದಂತೆ ಒಟ್ಟು ರೂ.20,00,000/-ಗಳ ಅನುದಾನ ನೀಡಲಾಗಿರುತ್ತದೆ. ಈ ಯೋಜನೆ ಅಡಿ ರೈತರ ಆದಾಯ ಹೆಚ್ಚಿಸುವ ಚಟುವಟಿಕೆಗಳಾದ ಸಮಗ್ರ ಕೃಷಿ ಪದ್ದತಿ ಸಾವಯವ ಕೈತೋಟಗಾರಿಕೆ, ಕೋಳಿ ಸಾಕಾಣಿಕೆ, ಬಹುವಾರ್ಷಿಕ ಮೇವುಗಳ ಬಗ್ಗೆ, 50 ತರಬೇತಿಗಳ ಮೂಲಕ ಸುಮಾರು 1000 ರೈತರಿಗೆ ಮಾಹಿತಿ ನೀಡಿ 180 ರೈತರ ಮೂಲಕ ಮೇಲ್ಕಂಡ ಚಟುವಟಿಕೆಗಳ ಪ್ರಾತ್ಯಕ್ಷತೆ ಪಡೆದ ರೈತರು ಆ ಪದ್ದತಿಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು ಹೊಸ ಆದಾಯದ ಮೂಲವನ್ನು ಕಂಡು ಹಿಡಿದುಕೊಂಡಿರುತ್ತಾರೆ. ಈ ಯೋಜನೆಯ ಕಾರ್ಯ ನಿರ್ವಹಣೆಯನ್ನು ವಾಹಿನಿ ಅಭಿವೃದ್ಧಿ ಸಂಸ್ಥೆಯು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ.

## ಕಾ;ರ್ಯಕ್ರಮದ












## 5. ನಬಾರ್ಡ್ ಪ್ರಾಯೋಜಿತ ರೈತ ಉತ್ಪಾದಕ ಸಂಸ್ಥೆಗಳ ರಚನೆ ಹಾಗೂ ಬಲವರ್ಧನೆ

ಜಲಾನಯನ ಅಭಿವೃದ್ದಿ ಹೊಂದಿದ ಕ್ಷೇತ್ರಗಳಿಗೆ ಯೋಜನೆಯ ಸುಸ್ಥಿರತೆ ಹಾಗೂ ರೈತರ ಆದಾಯದಲ್ಲಿ ಹೆಚ್ಚಳ ಮಾಡಬೇಕೆನ್ನುವ ಉದ್ದೇಶದಿಂದ 3 ವರ್ಷಗಳ ಅವಧಿಗೆ ಅಂದರೆ 2020ರ ಏಪ್ರಿಲ್ ನಿಂದ 2023 ರವರೆಗೆ ರೈತ ಉತ್ಪಾದಕ ಘಟಕಗಳ ರಚನೆಗೆ ನಬಾರ್ಡ್ ಆರ್ಥಿಕ ನೆರವು ನೀಡಿದ್ದು ವಾಹಿನಿ ಸಂಸ್ಥೆಗೆ ನಬಾರ್ಡ್ ಶಿಕಾರಿಪುರ ತಾಲೂಕಿನ ಉಡಗಣಿ, ಕೂಸ್ಪೂರು ಮತ್ತು ಕಣಿಯಾ ಗ್ರಾಮಗಳಲ್ಲಿ ಒಟ್ಟು 3 ರೈತ ಉತ್ಪಾದಕ ಘಟಕಗಳನ್ನು ರಚಿಸಲು ಅನುಮತಿ ನೀಡಿರುತ್ತಾರೆ. ಈಗ ಪ್ರಾರಂಭದ ಹಂತದಲ್ಲಿದ್ದು 3 ಗ್ರಾಮಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಿರುತ್ತೇವೆ.

| ಕ್ರ.ಸಂ | ರೈತ ಉತ್ಪಾದಕ ಸಂಸ್ಥೆಯ ಹೆಸರ | ವಿಳಾಸ | ಒಟ್ಟು ಸದಸ್ಯರು |
|---|---|---|---|
| 1 | ಉಡಗಣಿ ರೈತ ಉತ್ಪಾದಕ ಸಂಘ | ಉಡಗಣಿ | ಪ್ರಾರಂಭಿಕ ಹಂತದಲ್ಲಿದೆ |
| 2 | ಕನ್ನೂರು ರೈತ ಉತ್ಪಾದಕ ಸಂಘ | ಕನ್ನೂರು | ಪ್ರಾರಂಭಿಕ ಹಂತದಲ್ಲಿದೆ |
| 3 | ಕಣೀಯಾ ರೈತ ಉತ್ಪಾದಕ ಸಂಘ | ಕಣೀಯಾ | ಪ್ರಾರಂಭಿಕ ಹಂತದಲ್ಲಿದೆ |



## 6.ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ

ಕೃಷಿ ಇಲಾಖೆ ಮತ್ತು ಸಾವಯವ ಕೃಷಿ ಪ್ರಮಾಣನ ಸಂಸ್ಥೆ ಅಡಿ ಶಿಕಾರಿಪುರ ತಾಲೂಕಿನ ಗೋಪಾಲಕಣೀಯ ಗ್ರಾಮಆಯ್ಕೆಯಾಗಿದ್ದು ಆ ಗ್ರಾಮದ 38 ಜನ ರೈತರ ಸುಮಾರು 50 ಎಕರೆ ಪ್ರದೇಶವನ್ನು ಸಾವಯವ ಕೃಷಿ ಅಳವಡಿಸಲು ವಾಹಿನಿ ಅಭಿವೃದ್ದಿ ಸಂಸ್ಥೆಗೆ ಜವಾಬ್ದಾರಿಯನ್ನು ನೀಡಲಾಗಿದೆ. ಈ ಯೋಜನೆಯು 3 ವರ್ಷದ ಅವಧಿಯನ್ನು ಹೊಂದಿದ್ದು ಆಗಸ್ಟ್ 2019 ರಿಂದ ಜುಲೈ 2022 ವರೆಗೆ ಅನುಷ್ಠಾಗೊಳ್ಳಲಿದ್ದು ಈ ಕಾರ್ಯಕ್ರಮ ಅಡಿ ಸಾವಯವ ಕೃಷಿಕರಿಗೆ ಸಾವಯವ ಘಟಕಗಳಾದ ಎರೆಹುಳು ತೊಟ್ಟಿ, ಬಯೋಡೈಜೆಸ್ಟರ್ ಮತ್ತು ನೆಲಹಾಸುಗಳ ನಿರ್ಮಾಣಕ್ಕೆ ಸರ್ಕಾರದ ಧನ ಸಹಾಯದ ಸವಲತ್ತು ಇರುತ್ತದೆ.






# 7. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳು

**ಪೀಠಿಕೆ**

ರಾಷ್ಟ್ರೀಯ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯ ಮಾರ್ಗದರ್ಶನದ ಪ್ರಕಾರ ಕರ್ನಾಟಕ ಸರ್ಕಾರ ಗ್ರಾಮದ ಜನಸಂಖ್ಯೆಯ ಆಧಾರದ ಮೇಲೆ ಕುಡಿಯುವ ನೀರಿನ ಸೌಕರ್ಯಗಳನ್ನು ಒದಗಿಸುತ್ತಿದೆ. ಸಕಲ ಜೀವರಾಶಿಗಳಿಗೆ ನೀರು ಪ್ರಾಣಾಧಾರ. ಇಡೀ ಮಾನವ ಕುಲವು ನೀರನ್ನು ಜೀವ ಜಲವೆಂದು ಪರಿಗಣಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹರಡುವ ಖಾಯಿಲೆಗಳನ್ನು ಶೇ.80 ಕ್ಕಿಂತಲೂ ಸುರಕ್ಷಿತ ಕುಡಿಯುವ ನೀರು ಸರಬರಾಜು ಮತ್ತು ಸ್ವಚ್ಛ ಪರಿಸರ ನಿರ್ಮಾಣದಿಂದ ನಿವಾರಿಸಬುದಾಗಿದೆ. ಗ್ರಾಮಸ್ಥರ ಆರೋಗ್ಯ ಮಟ್ಟದ ಸುಧಾರಣೆಯಿಂದ ಅವರ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸಲು ಅನುವು ಮಾಡಿದಂತಾಗುವದು. ಇದು ಕೇವಲ ಸರ್ಕಾರ ಹಾಗೂ ಸಂಬಂದ ಪಟ್ಟ ಇಲಾಖೆಗಳಿಂದ ಮಾತ್ರ ಸಾಧ್ಯವಾಗುದಿಲ್ಲ. ಆದುದರಿಂದ ಸ್ಥಳಿಯ ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮ ನೀರು ಸರಬರಾಜು ನೈರ್ಮಲ್ಯ ಸಮೀತಿಗಳ ಮೂಲಕ ನೀರು ಮತ್ತು ಪ್ರತಿ ಗ್ರಾಮೀಣ ವ್ಯಕ್ತಿಗೆ ದಿನನಿತ್ಯದ ಬಳಕೆಗೆ ಸಾಕಷ್ಟು ನೀರು ಸರಬರಾಜು ಒದಗಿಸುವ ಅಗತ್ಯವಿದ್ದು, ಸ್ವಸಹಾಯ ಸಂಘದ ಮಹಿಳೆಯರ ಮೂಲಕ ಪ್ರತಿ ಗ್ರಾಮದಲ್ಲೂ ಪ್ರಮುಖ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಮಹಿಳೆಯರು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಜಾಥಾ ಕಾರ್ಯಕ್ರಮ ಮತ್ತು ಮಹಿಳೆಯರಿಗೆ ಸ್ವಚ್ಚತೆ , ಕುಡಿಯುವ ನೀರಿನ ಮಿತವ್ಯಯ ಬಳಕೆ ಬಗ್ಗೆ ಹಾಗೂ ಘನತ್ಯಾಜ್ಯ ನಿರ್ವಹಣೆ ಕುರಿತಂತೆ ಜಾಗೃತಿ ಮೂಡಿಸುವ ಪರಿಕಲ್ಪನೆ ಇರುವ ರಂಗೋಲಿಗಳನ್ನು ಮಹಿಳೆಯರು ಅತ್ಯುತ್ತಮವಾಗಿ ಬಿಡಿಸಿದ್ದು ಗ್ರಾಮಸ್ಥರಲ್ಲಿ ಈ ಮೂಲಕ ಜಾಗೃತಿ ಮೂಡಿಸಿರುತ್ತಾರೆ.

ಜಿಲ್ಲಾ ಪಂಚಾಯತಿ,ಬಳ್ಳಾರಿ, ಗ್ರಾಮೀಣ ಕುಡಿಯು ನೀರು ಮತ್ತು ನೈರ್ಮಲ್ಯ ಇಲಾಖೆ, ಬಳ್ಳಾರಿ ಹಾಗೂ ವಾಹಿನಿ ಅಭಿವೃದ್ದಿ ಸಂಸ್ಥೆ ಇವರ ಸಹಯೋಗದಲ್ಲಿ 2019-20 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ 4 ತಾಲೂಕುಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಯೋಜನೆ ಅಡಿಯಲ್ಲಿ, ಮಾಹಿತಿ,ಶಿಕ್ಷಣ,ಸಂವಹನ & ಸಾಮಾರ್ಥ್ಯಾಭಿವೃದ್ದಿ ಚಟುವಟಿಕೆಗಳ (ಐಇಸಿ/ಹೆಚ್.ಆರ್.ಡಿ) ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದ್ದು. ಬಳ್ಳಾರಿ ಜಿಲ್ಲೆಯ 4 ತಾಲೂಕುಗಳಾದ, ಬಳ್ಳಾರಿ, ಹೆಚ್.ಬಿ.ಹಳ್ಳಿ, ಕೂಡ್ಲಿಗಿ ಮತ್ತು ಸಂಡೂರು, ತಾಲೂಕಿನಲ್ಲಿ ಆಯ್ದ 20 ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕುರಿತು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಮಾಹಿತಿ ಶಿಕ್ಷಣ ಸಂವಹನ ಕುರಿತಂತೆ ಬೀದಿನಾಟಕ, ಶಾಲಾ ಮಕ್ಕಳಿಗೆ ಜಾಥಾ ಕಾರ್ಯಕ್ರಮ ಮತ್ತು ಕಿರುಚಿತ್ರ ಪ್ರದರ್ಶನ, ಶಾಲಾ ಮಕ್ಕಳಿಗೆ ಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ಸ್ವಸಹಾಯ ಸಂಘದ ಮಹಿಳೆಯರಿಗೆ ಜಾಥಾ ಕಾರ್ಯಕ್ರಮ ಮತ್ತು ರಂಗೋಲಿ ಸ್ಪರ್ಧೆ ಹಮ್ಮಿಕೊಂಡು ಯಶಸ್ವಿಗೊಳಿಸಲಾಗಿದೆ. ಹಾಗೂ ಸಾಮಾರ್ಥ್ಯಾಭಿವೃದ್ದಿ ಚಟುವಟಿಕೆಗಳಡಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ದಿನದ ತರಬೇತಿಯನ್ನು ನೀರಿನ ಗುಣಮಟ್ಟ, ನೀರು ಮತ್ತು ನೈರ್ಮಲ್ಯ ಶೌಚಾಲಯದ ಬಗ್ಗೆ ಮಳೆ ನೀರು ಕೊಯ್ಲಿನ ಮಹತ್ವ ಮತ್ತು ಮೇಲ್ವಿಚಾರಣೆ ಮತ್ತು ನಿರ್ವಹಣೆ ಮತ್ತು ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತು ತರಬೇತಿಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಮ್ಮಿಕೊಂಡು ತರಬೇತಿಯನ್ನು ಯಶಸ್ವಿಗೊಳಿಸಲಾಗಿದೆ.

ನೀರು ಬಳಕೆಯಲ್ಲಿ ಪ್ರಮುಖ ಪಾತ್ರ ವಹಿಸುವ ಮಹಿಳೆಯರು ಮತ್ತು ಶಾಲಾ ಮಕ್ಕಳಿಗೆ ನೀರಿನ ಮಿತವ್ಯಯ ಬಳಕೆ ಮತ್ತು ನೈರ್ಮಲ್ಯ ಕುರಿತು ಜನ ಜಾಗೃತಿ ಮೂಡಿಸಲು ಸದರಿ ಯೋಜನೆಯಲ್ಲಿ ಸ್ವ ಸಹಾಯ ಸಂಘಗಳ ಜಾಥಾ ಮತ್ತು ಶಾಲಾ ಮಕ್ಕಳ ಜಾಥಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಹಾಗೂ ಶಾಲಾ ಮಕ್ಕಳಲ್ಲಿ ನೀರು ಮತ್ತು ನೈರ್ಮಲ್ಯ ಕುರಿತು ವಿವಿಧ ವಿಷಯಗಳನ್ನು ಹಂಚಿಕೊಳ್ಳಲು ಭಾಷಣ ಮತ್ತು ಪ್ರಬಂದಸ್ಪರ್ಧೆ, ಚಿತ್ರಕಲೆ , ಗಳನ್ನು ಏರ್ಪಡಿಸಲಾಗಿರುತ್ತದೆ

## ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಂದ ಜಾಥ & ಕಿರುಚಿತ್ರ ಪ್ರದರ್ಶನ ಹಾಗೂ ಭಾಷಣ,ಪ್ರಬಂಧ& ಚಿತ್ರಕಲೆ









## ಸ್ವಸಹಾಯ ಸಂಘದ ಮಹಿಳೆಯರ ಜಾಥಾ ಮತ್ತು ರಂಗೋಲಿ ಸ್ಪರ್ಧೆಯ ಛಾಯಾಚಿತ್ರಗಳು:





2019-20 ನೇ ಸಾಲಿನಲ್ಲಿ ಒಟ್ಟು 15 ಬೀದಿನಾಟಕಗಳನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ಮಹತ್ವ, ಶೌಚಾಲಗಳ ಬಳಕೆ ನಿರ್ವಹಣೆ , ಆರೋಗ್ಯಕ್ಕೆ ಸಂಬಂಧಿಸಿದಂತೆ ರೋಗ–ರುಜಿನಗಳು ಹರಡುವ ಬಗ್ಗೆ, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಹಾಗೂ ಪರಿಸರ ಸಂರಕ್ಷಣೆ ಕುರಿತು ಗ್ರಾಮದ ಪ್ರಮುಖ ಸ್ಥಳಗಳಲ್ಲಿ ಬೀದಿನಾಟಕಗಳನ್ನು ನುರಿತ ಕಲಾತಂಡದಿಂದ ಪ್ರದರ್ಶಿಸಲಾಗಿದೆ. ಈ ಕುರಿತಂತೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ.

## ಬೀದಿನಾಟಕಗಳ ಪ್ರದರ್ಶನದ ಛಾಯಾಚಿತ್ರಗಳು





2019-20 ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಒಟ್ಟು 4 ತಾಲೂಕುಗಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಶೇಷ ಗ್ರಾಮ ಸಭೆಗಳನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಲ್ಲಿ ಪ್ರತೀ ಗ್ರಾಮ ಪಂಚಾಯಿತಿಗೆ ಒಳಪಡುವ ಗ್ರಾಮಗಳಲ್ಲಿ ಒಟ್ಟಾರೆ ಕಾರ್ಯಕ್ರಮಗಳು ಮುಗಿದ ನಂತರ ಕೊನೆಯಲ್ಲಿ ಈ ವಿಶೇಷ ಗ್ರಾಮ ಸಭೆಯನ್ನು ಹಮ್ಮಿಕೊಂಡು ಈ ಸಭೆಯಲ್ಲಿ ಎಲ್ಲಾ ಶಾಲೆಯಲ್ಲಿ ಹಮ್ಮಿಕೊಂಡ ಸ್ಪರ್ಧೆಯಲ್ಲಿ ವಿಜೇತರಾದ ಶಾಲಾ ಮಕ್ಕಳು ಭಾಗವಹಿಸುವುದು ಈ ಮಕ್ಕಳಿಗೆ ಈ ಕಾರ್ಯಕ್ರಮದಲ್ಲಿ ಅತಿಥಿಗಳಿಂದ ಬಹುಮಾನ & ಪ್ರಮಾಣ ಪತ್ರ ವಿತರಿಸಲಾಗಿದೆ ಹಾಗೂ ಅದೇ ರೀತಿಯಲ್ಲಿ ಮಹಿಳಾ ಸದಸ್ಯರಿಗೆ ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದ ಮಹಿಳೆಯರಿಗೂ ಸಹ ಬಹುಮಾನವನ್ನು & ಪ್ರಮಾಣ ಪತ್ರ ವಿತರಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಕುಡಿಯುವ ನೀರು, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತಂತೆ ಸಾರ್ವಜನಿಕರೊಂದಿಗೆ ಚರ್ಚಿಸಲಾಗಿದೆ. ಹಾಗೂ ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ಹಾಗೂ ಪಂಚಾಯಿತಿ ವತಿಯಿಂದ ಈಗಾಗಲೇ ಹಮ್ಮಿಕೊಂಡಿರುವ ಕ್ರಮಗಳ ಬಗ್ಗೆ ಅನುಷ್ಠಾನಗೊಳಿಸುವಂತೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಸಭೆಯಲ್ಲಿ ಚುನಾಯಿತ ಸದಸ್ಯರು, ಶಾಲಾ ಮಕ್ಕಳು, ಶಾಲಾ ಶಿಕ್ಷಕರು, ಅಂಗನವಾಡಿ/ಆಶಾ ಕಾರ್ಯಕರ್ತೆಯರು, ಆರೋಗ್ಯ ಸಹಾಯಕರು, ಸಿಬ್ಬಂದಿ, ಗ್ರಾಮ ಪಂಚಾಯಿತಿ ಸಿಬ್ಬಂದಿ, ಮಹಿಳಾ ಸಂಘದ ಸದಸ್ಯರು, ಊರಿನ ಪ್ರಮುಖರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲಾಯಿತು.

## ವಿಶೇಷ ಗ್ರಾಮಸಭೆಯ ಛಾಯಾ ಚಿತ್ರಗಳು





2019-20 ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಒಟ್ಟು 4 ತಾಲೂಕುಗಳ 20 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ ಒಟ್ಟು 10 ತರಬೇತಿ ಗಳನ್ನು ಹಮ್ಮಿಕೊಂಡಿದ್ದು ಈ ತರಬೇತಿಯಲ್ಲಿ ಸಮಿತಿ ಸದಸ್ಯರು ಜವಾಬ್ದಾರಿ ಮತ್ತು ಕರ್ತವ್ಯಗಳು, ಕುಡಿಯುವ ನೀರಿನ ಮಹತ್ವ, ಗ್ರಾಮಕ್ಕೆ ಸಂಬಂಧಿಸಿದಂತೆ ವಿವಿಧ ನೀರಿನ ಮೂಲಗಳ ಪುನರ್ ಪರಿಶೀಲನೆ, ಅವುಗಳನ್ನು ಬಳಕೆ ಮಾಡಲು ಕೈಗೊಳ್ಳುವ

ಕಾರ್ಯಕ್ರಮಗಳು, ಗ್ರಾಮ ನೀರು ಸರಬರಾಜು ನೈರ್ಮಲ್ಯ ಸಮೀತಿಗಳ ಮೂಲಕ ನೀರು ಮತ್ತು ಪ್ರತಿ ಗ್ರಾಮೀಣ ವ್ಯಕ್ತಿಗೆ ದಿನನಿತ್ಯದ ಬಳಕೆಗೆ ಸಾಕಷ್ಟು ನೀರು ಸರಬರಾಜು ಒದಗಿಸುವ ಅಗತ್ಯವಿದ್ದು, ಅವುಗಳ ಅಂದಾಜು ತಯಾರಿ ಅಥವಾ ಆಯವ್ಯಯ ಕುರಿತಂತೆ ಚರ್ಚಿಸುವುದು. ಮತ್ತು ಗ್ರಾಮಕ್ಕೆ ಸಂಬಂಧಿಸಿದಂತೆ ಘನ ಮತ್ತು  ದ್ರವ ತ್ಯಾಜ್ಯ ನಿರ್ವಹಣೆ ಕುರಿತಂತೆ ಪಂಚಾಯಿತಿ ಹಮ್ಮಿಕೊಂಡಿರುವ ಕಾರ್ಯಗಳ ಬಗ್ಗೆ ಚರ್ಚಿಸಿ ಅನುಷ್ಠಾನಕ್ಕೆ ತರುವಂತೆ ಕ್ರಮ ಕೈಗೊಳ್ಳುವಂತೆ ಸಹಕರಿಸುವುದು. ಈ ಕಾರ್ಯಕ್ರಮದಲ್ಲಿ ಸಮಿತಿ ಸದಸ್ಯರು, ಗ್ರಾಮ ಪಂಚಾಯಿತಿ ಸಿಬ್ಬಂದಿ, ಆರೋಗ್ಯ ಇಲಾಖೆ ಸಿಬ್ಬಂದಿ, ಅಂಗನವಾಡಿ/ಆಶಾ ಕಾರ್ಯಕತೆಯರು ಭಾಗವಹಿಸಿ  ತರಬೇತಿಯನ್ನು ಯಶಸ್ವಿಗಿಳಿಸಲಾಯಿತು. ಹಾಗೂ ಸ್ಥಳೀಯ ಸಿಬ್ಬಂದಿಗಳಿಗೆ ತರಬೇತಿ, ಮತ್ತು ಚುನಾಯಿತ ಪ್ರತಿನಿಧಿಗಳ ತರಬೇತಿಯನ್ನು ಹಮ್ಮಿಕೊಂಡಿದ್ದು ಈ ತರಬೇತಿಯಲ್ಲಿ ಸಹ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಹಲವಾರು ವಿಷಯಗಳನ್ನು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಯಿತು. ಈ ತರಬೇತಿಗಳಲ್ಲಿ  ಚುನಾಯಿತಿ ಪ್ರತಿನಿಧಿಗಳು, ಶಾಲಾ ಶಿಕ್ಷಕರು, ಸ್ಥಳಿಯ ಮಟ್ಟದ ಸಿಬ್ಬಂದಿಗಳು ಭಾಗವಹಿಸಿ ಈ ತರಬೇತಿಗಳನ್ನು ಯಶಸ್ವಿಗೊಳಿಸಲಾಯಿತು.

## ಪಂಚಾಯತಿ ಮಟ್ಟದ ಸಿಬ್ಬಂದಿಗಳ ತರಬೇತಿಯ ಛಾಯಾ ಚಿತ್ರಗಳು













## 2019-20 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಕೂಡ್ಲಿಗಿ | ಬಳ್ಳಾರಿ | ಸಂಡೂರು | ಹೆಚ್.ಬಿ. ಹಳ್ಳಿ | ಒಟ್ಟು ಕಾರ್ಯಕ್ರಮಗಳ ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|---|---|---|---|---|
| 1 | ವಿಶೇಷ ಗ್ರಾಮ ಸಭೆಗಳು | 13 | 01 | 01 | 04 | 19 | 2101 |
| 2 | ಸ್ತ್ರೀಶಕ್ತಿ ಸಂಘಗಳ ಜಾಥ ಕಾರ್ಯಕ್ರಮ & ರಂಗೋಲಿ ಸ್ಪರ್ಧೆ | 80 | 06 | 03 | 19 | 108 | 4503 |
| 3 | ಶಾಲಾ ಮಕ್ಕಳ ಜಾಥ & ಕಿರುಚಿತ್ರ ವೀಕ್ಷಣೆ | 81 | 06 | 03 | 19 | 109 | 17165 |
| 4 | ಶಾಲಾ ಮಕ್ಕಳ ಚಿತ್ರಕಲೆ ಸ್ಪರ್ಧೆ | 75 | 06 | 03 | 19 | 103 | 3719 |
| 5 | ಶಾಲಾ ಮಕ್ಕಳ ಭಾಷಣ ಸ್ಪರ್ಧೆ | 65 | 06 | 03 | 19 | 93 | 1885 |
| 6 | ಶಾಲಾ ಮಕ್ಕಳ ಪ್ರಬಂಧ ಸ್ಪರ್ಧೆ | 67 | 06 | 03 | 19 | 95 | 3130 |
| 7 | ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರಿಗೆ ತರಬೇತಿ | 07 | 00 | 00 | 02 | 09 | 385 |
| 8 | ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ | 06 | 00 | 01 | 02 | 09 | 167 |
| 09 | ಸ್ಥಳೀಯಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ತರಬೇತಿ | 06 | 01 | 01 | 02 | 10 | 435 |
| 10 | ಬೀದಿ ನಾಟಕಗಳು | 09 | 01 | 01 | 04 | 15 | 3210 |

## 8. ಕೃಷಿ ಇಲಾಖೆ, ಬಳ್ಳಾರಿ ಮತ್ತು ಚಿಕ್ಕಬಳ್ಳಾಪುರ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಬ್ಯಾಚ್–3, ಮತ್ತು ಬ್ಯಾಚ್–4 ಉಪಜಲಾನಯನ ಯೋಜನೆ ಅಡಿಯಲ್ಲಿ 2018-19 & 2019-20 ನೇ ಸಾಲಿನ ಉದ್ಯಮಶೀಲತಾ ಜಾಗೃತಿ ತರಬೇತಿ ಮತ್ತು ಉದ್ಯಮಶೀಲತಾ ಕೌಶಾಲ್ಯಾಭಿವೃದ್ಧಿ ಕಾರ್ಯಕ್ರಮ.

### ಕೋಗಳಿ ಉಪಜಲಾನಯನ–ಹೆಚ್.ಬಿ.ಹಳ್ಳಿ

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಬ್ಯಾಚ್–3, ಕೋಗಳಿ ಉಪಜಲಾನಯನ ಯೋಜನೆ ಅಡಿಯಲ್ಲಿ ಎಸ್.ಇ.ಡಿ.ಪಿ ಮತ್ತು ಇ.ಎ.ಪಿ. ತರಬೇತಿಗಳನ್ನು ಕೋಗಳಿ, ಕೋಗಳಿ ತಾಂಡಾ ಮತ್ತು ಅಂಬಳಿ ಗ್ರಾಮಗಳಲ್ಲಿ ಉದ್ಯಮಶೀಲತಾ ತರಬೇತಿ ಶಿಬಿರಗಳನ್ನು ಸ್ವಸಹಾಯ ಸಂಘಗಳ 165 ಸದಸ್ಯರುಗಳಿಗೆ ನಾಲ್ಕು ಬ್ಯಾಚ್ ಗಳಲ್ಲಿ ವಿವಿಧಚಟುವಟಿಕೆಗಳಾದ ಹೈನುಗಾರಿಕೆ, ಅಣಬೆ ಬೇಸಾಯ, ಟೈಲರಿಂಗ್ ತರಬೇತಿಗಳನ್ನು ನುರಿತ ಸಂಪನ್ಮೂಲವ್ಯಕ್ತಿಗಳಿಂದ ಕೊಡಲಾಗಿದ್ದು, ಈ ತರಬೇತಿಗಳನ್ನು ಫಲಾನುಭವಿಗಳು ಪಡೆದುಕೊಂಡಿದ್ದು ಹೆಚ್ಚಿನ ಆದಾಯಗಳಿಸಲು ಈ ತರಬೇತಿ ಉತ್ತಮವಾಗಿ ಈ ತರಬೇತಿ ಪೂರ್ಣಗೊಳಿಸಲಾಗಿದೆ.

### ಕುಂಟನಾಳ್ ಉಪಜಲಾನಯನ ಯೋಜನೆ–ಬಳ್ಳಾರಿ

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಬ್ಯಾಚ್–4 ಕುಂಟನಾಳ್ ಉಪಜಲಾನಯನ ಯೋಜನೆ ಅಡಿಯಲ್ಲಿ ರೂಪನಗುಡಿ, ರಾಯಾಪುರ ಮತ್ತು ಕುಂಟನಾಳ್ ಗ್ರಾಮಗಳಲ್ಲಿ 3 ದಿನಗಳು ಹೈನುಗಾರಿಕೆ ತರಬೇತಿಯನ್ನು ರೂಪನಗುಡಿಯಲ್ಲಿ ಹಾಗೂ 21 ದಿನಗಳ ಹೋಲಿಗೆ ತರಬೇತಿಯನ್ನು ಕುಂಟನಾಳ್ ಗ್ರಾಮದ ಸ್ವ–ಸಹಾಯ ಸಂಘದ ಸದಸ್ಯರಿಗೆ ಕೊಡಲಾಗಿದೆ. ಉದ್ಯಮಶೀಲತಾ ತರಬೇತಿ ಶಿಬಿರಗಳನ್ನು ಸ್ವಸಹಾಯ ಸಂಘಗಳ 159 ಸದಸ್ಯರುಗಳಿಗೆ ವಿವಿಧ ಚಟುವಟಿಕೆಗಳಾದ ಹೈನುಗಾರಿಕೆ, ಅಣಬೆ ಬೇಸಾಯ ಮತ್ತು ಟೈಲರಿಂಗ್ ತರಬೇತಿಗಳನ್ನು ನುರಿತ ಉಪನ್ಯಾಸಕರಿಂದ ನೀಡಿದ್ದು, ಈ ತರಬೇತಿಗಳನ್ನು ಫಲಾನುಭವಿಗಳು ಪಡೆದುಕೊಂಡು ತಮ್ಮ ಜೀವನ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಪ್ರಯೋಜನವಾಗಿದೆ. ಈ ತರಬೇತಿ ಪಡೆದುಕೊಂಡ ಫಲಾನುಭವಿಗಳಿಗೆ ಇಲಾಖೆ ಮತ್ತು ಸಂಸ್ಥೆವತಿಯಿಂದ ಪ್ರಮಾಣ ಪತ್ರ ಸಹ ನೀಡಲಾಗಿದೆ.

### ವರಲಕೊಂಡ ಉಪಜಲಾನಯನ ಯೋಜನೆ– ಗುಡಿಬಂಡೆ

*ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಬ್ಯಾಚ್–4 ವರಲಕೊಂಡ ಉಪಜಲಾನಯನ ಯೋಜನೆ, ಗುಡಿಬಂಡೆ ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 41 ಸಂಘಗಳ ಸದಸ್ಯರಿಗೆ ಉದ್ಯಮಶೀಲತಾ ತರಬೇತಿ ಶಿಬಿರಗಳನ್ನು ಸ್ವಸಹಾಯ ಸಂಘಗಳ ಎಸ್.ಇ.ಡಿ.ಪಿ ತರಬೇತಿ–150 ಸದಸ್ಯರುಗಳಿಗೆ ವಿವಿಧ ಚಟುವಟಿಕೆಗಳಾದ ಹೈನುಗಾರಿಕೆ, ಮತ್ತು ಟೈಲರಿಂಗ್ ತರಬೇತಿಗಳನ್ನು ನುರಿತ ಸಂಪನ್ಮೂಲವ್ಯಕ್ತಿಗಳುನೀಡಿದ್ದು, ಹಾಗೂ ಇ.ಎ.ಪಿ. ತರಬೇತಿಯನ್ನು 615 ಸದಸ್ಯರು ಪಡೆದುಕೊಂಡು ಫಲಾನುಭವಿಗಳು ತಮ್ಮ ಜೀವನ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಪ್ರಯೋಜನವಾಗಿದೆ.

| ಕ್ರ.ಸಂ | ಉಪಜಲಾನಯನ ಹೆಸರು | ತಾಲೂಕ | ಉದ್ಯಮಶೀಲತಾ ಜಾಗೃತಿ ತರಬೇತಿ ಪಡೆದ ಸದಸ್ಯರ ಸಂಖ್ಯೆ | ಉದ್ಯಮಶೀಲತಾ ಕೌಶಲ್ಯ ತರಬೇತಿ ಪಡೆದ ಸದಸ್ಯರ ಸಂಖ್ಯೆ |
|---|---|---|---|---|
| 1 | ಕೋಗಳಿ ಉಪಜಲಾನಯನ | ಹೆಚ್.ಬಿ.ಹಳ್ಳಿ | 165 | 65 |
| 2 | ಕುಂಟನಾಳ್ ಉಪಜಲಾನಯನ | ಬಳ್ಳಾರಿ | 159 | 65 |
| 3 | ವರಲಕೊಂಡ ಉಪಜಲಾನಯನ | ಗುಡಿಬಂಡೆ | 615 | 150 |

# ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಕಾರ್ಯಕ್ರಮದ ಛಾಯಾ ಚಿತ್ರಗಳು

















## 9. ಸಂಸ್ಥೆಯ ಆಡಳಿತ ಮತ್ತು ಹಣಕಾಸು ನಿರ್ವಹಣೆ ಸಾಮರ್ಥ್ಯ ಅಭಿವೃದ್ಧಿ

**ಅ.** ವಾಹಿನಿ ಅಭಿವೃದ್ದಿ ಸಂಸ್ಥೆಯ ಉತ್ತಮ ಆಡಳಿತ, ಹಣಕಾಸು ನೀರ್ವಹಣೆ ಮತ್ತು ಲೆಕ್ಕಪತ ನಿರ್ವಹಣೆ ಕುರಿತು ದೆಹಲಿ ಮೂಲದ FMSF ಸಂಸ್ಥಯು ನಮ್ಮ ಸಂಸ್ಥೆಯ ಕೇಂದ್ರ ಆಡಳಿತ ಕಛೇರಿಗೆ ಕ್ಷೇತ್ರ ಬೇಟಿನೀಡಿ ತಾಂತ್ರಿಕ ಮಾಹಿತಿ ನೀಡುವಮೂಲಕ ಸಂಸ್ಥೆಯನ್ನು ಬಲಪಡಿಸಲು ಮತ್ತು ಅಳವಡಿಸಿಕೊಳ್ಳಲು ಸಹಕರಿಸಿರುತ್ತಾರೆ. ಸಂಸ್ಥೆಯ ಆಡಳಿತ ಮಂಡಳಿ, ಕಾರ್ಯದರ್ಶಿ ಹಾಗೂ ಹಿರಿಯ ಸಿಬ್ಬಂದಿಗಳಿಗೆ ಎರಡುಬಾರಿ ತರಬೇತಿಗಳನ್ನು ನೀಡಿರುತ್ತಾರೆ, ತರಬೆತಿ ಪಡೆದ ನಂತರ ಸಂಸ್ಥೆಯಲ್ಲಿ ಕೈಗೋಂಡಿರುವ ಕಾರ್ಯನುಸರಣೆ ಅಂಶಗಳನ್ನು ಪರಿಗಣಿಸಿ FMSF ಸಂಸ್ಥಯು ಮೌಲ್ಯಮಾಪನ ಪ್ರಮಾಣ ಪತ್ರವನ್ನು ನೀಡುವರು.









### ಆ. ಧ್ವನಿ ಫೌಂಡೇಶನ್, ಬೆಂಗಳೂರು ಇವರ ನಿರಂತರ ಕಾರ್ಯಕ್ರಮ:–

ಸಂಸ್ಥೆಯ ಸುಸ್ಥಿರ ಬೆಳವಣಿಗೆಗೆ 2019-20 ನೇ ಸಾಲಿನಲ್ಲಿ ಧ್ವನಿ ಫೌಂಡೇಶನ್, ಬೆಂಗಳೂರು ಇವರು 18 ತಿಂಗಳುಗಳು **ನಿರಂತರ ಕಾರ್ಯಕ್ರಮದಡಿಯಲ್ಲಿ** ಸಂಸ್ಥೆಯನ್ನು ಆಯ್ಕೆಮಾಡಿಕೊಂಡಿದ್ದು, ಕಾರ್ಯನಿರ್ವಹಿಸುವ ಆಡಳಿತ ಮಂಡಳಿ ಸದಸ್ಯರುಗಳಿಗೆ , ಸಿಬ್ಬಂದಿಗಳಿಗೆ ಸಂಸ್ಥೆಗೆ ಅವಶ್ಯವಾಗಿರುವ ಮಾಹಿತಿಯನ್ನು ಅಳವಡಿಸಿಕೊಳ್ಳಲು ತರಬೇತಿಗಳು & ಕಾರ್ಯಾಗಾರ ಮುಖಾಂತರ ದಾಖಲಾತಿ ನಿರ್ವಹಣೆ, ಸಂಸ್ಥೆಯಲ್ಲಿ ಒಳಗೊಂಡಿರಬೇಕಾದ ಕಾನೂನಾತ್ಮಕ ನಿಯಮಗಳು, ಆನ್‌ಲೈನ್ ನಿರ್ವಹಣೆ, ಹಣಕಾಸಿನ ಉತ್ತಮ ನಿರ್ವಹಣೆ, ಮಾನವ ಸಂಪನ್ಮೂಲ ನಿರ್ವಹಣೆ, ಮಾರುಕಟ್ಟೆ, ನಾಯಕತ್ವ ಗುಣ , ಕಾರ್ಯಕ್ರಮ ಸಂಯೋಜನೆ ಈ ವಿಷಯಗಳಲ್ಲಿ ಸಂಸ್ಥೆಯು ಹೆಚ್ಚು ಪರಿಣಿತಿ ಹೊಂದಲು ಸಹಕರಿಸಲಿದೆ.








# 10. ಕೃಷಿ ಇಲಾಖೆಯ ಕಾರ್ಯಕ್ರಮಗಳು

2019-20 ನೇ ಸಾಲಿನಲ್ಲಿ ಕೃಷಿ ಇಲಾಖೆ, ಹೊಸಪೇಟೆ ಮತ್ತು ವಾಹಿನಿ ಅಭಿವೃದ್ದಿ ಸಂಸ್ಥೆ ಸಹಯೋಗದೊಂದಿಗೆ ದಿನಾಂಕ 09.01. 2020 ಮತ್ತು 10.01.2020 ರಂದು 2 ದಿನಗಳು ಹಂಪಿ ಉತ್ಸವ ವನ್ನು ಏರ್ಪಡಿಸಿದ್ದು ಈ ಕಾರ್ಯಕ್ರಮದಲ್ಲಿ ಸಂಸ್ಥೆವತಿಯಿಂದ ವಸ್ತು ಪ್ರದರ್ಶನ ಏರ್ಪಾಡು ಮಾಡಿದ್ದು, ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳು, ಮಾಹಿತಿ ನೀಡುವ ಕರಪತ್ರಗಳು, ಕೃಷಿಹೊಂಡ, ಬದುಗಳ ನಿರ್ಮಾಣ, ಸಾವಯವ ಕೃಷಿ ಮಾಹಿತಿ & ಪ್ರಾತ್ರಯಕ್ಷಿಕೆ, ಜಲಾನಯನ ಪ್ರಾತ್ಯಕ್ಷಿಕೆ, ಬ್ಯಾನರ್‌ಗಳು ಇವುಗಳನ್ನು ಪ್ರದರ್ಶಿಸಲಾಗಿದೆ.

ಹೊಬಳಿ ಮಟ್ಟದ ಸಮಗ್ರ ಕೃಷಿ ಅಭೀಯಾನ ಕಾರ್ಯಕ್ರಮದಡಿ ಸಂಸ್ಥೆಯು ಇಲಾಖೆಯ ಸೌಲಭ್ಯಗಳ ಮಾಹಿತಿ, ಸಾವಯವ ಕೃಷಿ ಉತ್ಪನ್ನಗಳ ಮಾರಾಟ ಮತ್ತು ಮಾಹಿತಿ ಮಳಿಗೆಗಳನ್ನು ತೆರೆದು, ರೈತರಿಗೆ ಹಾಗೂ ಸಾರ್ವಜನಿಕರಿಗೆ ತಾತ್ರಿಂಕ ಮಾಹಿತಿಯನ್ನು ನೀಡಲಾಯಿತು.
















# ವಾಹಿನಿ ಅಭಿವೃದ್ಧಿ ಸಂಸ್ಥೆ (ರಿ)

## 2019-20 ನೇ ಸಾಲಿನ ವಾರ್ಷಿಕ ವರದಿ

















**ವಾಹಿನಿ ಅಭಿವೃದ್ಧಿ ಸಂಸ್ಥೆ (ರಿ) ಹೊಸಪೇಟೆ,**

ಕಾನೀಶಾಲೆಹತ್ತಿರ, ಮೃತ್ಯುಂಜಯನಗರ, ಹೊಸಪೇಟೆ. ಬಳ್ಳಾರಿ ಜಿಲ್ಲೆ.

ಮೊಬೈಲ್ ನಂ-9449569022.

**Vahini Development Society**
Sree Veerabhadreshwara Nilaya, Near Connie School
M J Nagar
Hospet

## Provisional Income and Expenditure Statement

1-Apr-2019 to 31-Mar-2020

| Particulars | 1-Apr-2019 to 31-Mar-2020 | |
|---|---|---|
| **Direct Expenses** | | 51,17,221.57 |
| Animal Health Camp Exp A/c | 5,000.00 | |
| Audit Fee | 40,000.00 | |
| Bagepalli Rsk Staff Salary | 2,81,000.00 | |
| Bank Charge | 7,852.57 | |
| CDPC Office Programme Exp A/c | 45,000.00 | |
| DD Amount Payable | 1,37,940.00 | |
| Digital Sign Exp A/c | 5,000.00 | |
| Electicity Bill Exp A/c | 825.00 | |
| Former Facilitator Honoranum A/c | 78,000.00 | |
| Four Wheeler Service Exp A/c | 7,059.00 | |
| IEC/HRD Programme-Exp A/c | 11,07,240.00 | |
| Insurence A/c | 3,218.00 | |
| Krushi Abhiyana Programme Exp A/c | 3,08,000.00 | |
| MGIRED Training Exp A/c | 94,741.00 | |
| NGO Renewal Charges | 14,000.00 | |
| Printing & Stationery | 63,478.00 | |
| Salary Exp | 1,14,500.00 | |
| SBM Programme Exp A/c | 5,54,330.00 | |
| SEDP Training Programms Exp A/c | 1,72,500.00 | |
| Seeds Treatment Programme Exp A/c | 1,35,280.00 | |
| Staff EPF A/c | 1,01,250.00 | |
| Staff Honoranum Exp | 7,23,800.00 | |
| Stationery Exp | 61,691.00 | |
| Telephone Charges | 5,537.00 | |
| Tendre Fee A/c | 6,010.00 | |
| Watershed Programme Exp A/c | 4,99,970.00 | |
| ZBNF Staff Honoranum A/c | 5,44,000.00 | |
| **Indirect Expenses** | | 45,421.00 |
| Community Work Expencies | 7,000.00 | |
| Miscellaneous Exp A/c | 3,000.00 | |
| Misc Exp | 120.00 | |
| Office Expense | 17,646.00 | |
| Stationery | 5,600.00 | |
| Stationery Expense | 12,055.00 | |
| Excess of income over expenditure | | 30,428.43 |
| **Total** | | 51,93,071.00 |

| Particulars | 1-Apr-2019 to 31-Mar-2020 | |
|---|---|---|
| **Direct Incomes** | | 50,93,071.00 |
| Bank Interest | 33,564.00 | |
| Grant Receied From MGIRD Bengalur | 1,06,308.00 | |
| Grant Receved From ADA Hadagali | 3,43,110.00 | |
| Grant Recieved From ADA Ballary | 1,72,500.00 | |
| Grant Recieved From ADA Hosapete | 2,63,421.00 | |
| Grant Recieved From ADA Kudligi | 80,262.00 | |
| Grant Recieved From ADA Sanduru | 1,05,000.00 | |
| Grant Recieved From ADA Sirugoppa | 1,76,598.00 | |
| Grant Recieve From ADA H. B. Halli | 2,84,025.00 | |
| Grant Recieve From CDPO Office hospet | 2,28,000.00 | |
| Grants From Bagepalli Sub Treasury | 4,48,834.00 | |
| Grants From Watershed | 4,51,259.00 | |
| G.R.F CDPO Balabhavana Society Prg Hosapete | 45,000.00 | |
| GRF IEC/HRD PRG 2019-20 | 18,33,760.00 | |
| G.R.F Krushi Abhiyana Hosapete | 50,000.00 | |
| SBM Project Z.P. Bellary | 4,71,420.00 | |
| **Indirect Incomes** | | 1,00,000.00 |
| Donation Account | 1,00,000.00 | |
| **Total** | | 51,93,071.00 |

Secretary
Vahini Development Society
HOSPET-583203. Bellary Dist

For M/s. K. RAJESH & ASSOCIATES
Chartered Accountants
(K. Rajesh)
Proprietor
Membership No. 217717
Firm Reg. No 011442S

# Vahini Development Society

Sree Veerabhadreshwara Nilaya, Near Connie School
M J Nagar
Hospet

## Provisional Balance Sheet

1-Apr-2019 to 31-Mar-2020

| Liabilities | | as at 31-Mar-2020 | Assets | | as at 31-Mar-2020 |
|---|---|---|---|---|---|
| **Capital Account** | | **4,59,812.00** | **Fixed Assets** | | **4,67,844.00** |
| Reserves & Surplus | 4,37,912.00 | | *Amplifier(Mic)Purchased* | 7,905.00 | |
| *Deposit* | 15,000.00 | | *Car* | 1,42,016.00 | |
| *Life Membership Fees* | 6,900.00 | | *Cement Ring* | 58,250.00 | |
| | | | *CPU Purchased* | 1,898.00 | |
| **Loans (Liability)** | | | *Dell Lap Top Purchesed Exp A/c* | 14,620.00 | |
| | | | *Digital Camera 1* | 253.00 | |
| **Current Liabilities** | | **46,96,330.00** | *Digital Camera 2* | 4,547.00 | |
| Provisions | 53,000.00 | | *Furnitures* | 23,986.00 | |
| *Check Returned* | 8,000.00 | | *HUDA CA Site Purchase* | 1,46,200.00 | |
| *Loan From Members* | 31,25,357.00 | | *LCD Projector* | 8,656.00 | |
| *UNSPEND Grantd BAgepalli S Treesury* | 37,113.00 | | *Printer* | 13,067.00 | |
| *UNSPEND Grants From NABARD Shimoga* | 2,73,000.00 | | *Tailoringn Machin Parchege* | 20,612.00 | |
| *UNSPEND Grants Sidlaghatta S.TReasury* | 1,82,620.00 | | *Two Wheeler* | 25,834.00 | |
| *UNSPENT GRF IEDHRD PRG 2019-20* | 10,17,240.00 | | | | |
| | | | **Current Assets** | | **47,18,726.43** |
| **Suspense A/c** | | | Bank Accounts | 37,41,575.93 | |
| | | | *EMD* | 1,86,526.50 | |
| **Excess of income over expenditure** | | **30,428.43** | *FD Amount A/c* | 75,000.00 | |
| *Opening Balance* | | | *Grant Receivable* | 24,100.00 | |
| *Current Period* | 30,428.43 | | *Grant Receivable RDW & S Bellary* | 83,114.00 | |
| | | | *TDS Receivable* | 6,08,410.00 | |
| **Total** | | **51,86,570.43** | **Total** | | **51,86,570.43** |

Secretary
Vahini Development Society
HOSPET-583203. Bellary Dist

For M/s. K. RAJESH & ASSOCIATES
Chartered Accountants
(K. Rajesh)
Proprietor
Membership No. 217717
Firm Reg. No 011442S